ಕೃಷ್ಣಾ ಮೇಲ್ದಂಡೆ ಯೋಜನೆಯ ಎನ್.ಎಲ್.ಬಿ.ಸಿ. ಮುಖ್ಯ ಕಾಲುವೆ ಕುಸಿಯುತ್ತಿರುವುದು

೩೪೭. **ಶ್ರೀ ಶಿವಶೇಖರಪ್ಪಗೌಡ ಶಿರವಾಳ** (ಶಹಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಎನ್‌ಎಲ್‌ಬಿಸಿ ಮುಖ್ಯ ಕಾಲುವೆ ೫೨ನೇ ಕಿ.ಮಿ ದೂರದಲ್ಲಿ ಕುಸಿಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಮತ್ತು ಅದಕ್ಕೆ ಕಾರಣಗಳೇನು ?

ಆ) ಹಾಗಿದ್ದಲ್ಲಿ ಸದರಿ ಕಾಲುವೆಯನ್ನು ನಿರ್ಮಿಸಿದ 'ಏಜೆನ್ಸಿ' ಯಾವುದು ಮತ್ತು ಅದಕ್ಕೆ ವೆಚ್ಚವಾದ ಹಣವೆಷ್ಟು ?

ಇ) ನಿರ್ಮಾಣ ಮಾಡಿದವರ ಬಗ್ಗೆ ಕ್ರಮವನ್ನೇನಾದರೂ ಕೈಗೊಳ್ಳಲಾಗಿದೆಯೆ ?

ಈ) ಸದರಿ ಕಾಮಗಾರಿಯನ್ನು ಕ್ವಾಲಿಟಿ ಕಂಟ್ರೋಲ್‌ರವರು ಪರಿಶೀಲಿಸಿದ್ದರೆ ಹಾಗೆ ಅವರ ವರದಿ ಏನು ?

ಉ) ಈಗ ರಿಪೇರಿಗೆ ತಗಲುವ ವೆಚ್ಚವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ನಾರಾಯಣಪುರ ಎಡದಂಡೆ ಕಾಲುವೆಯ ೫೨ನೇ ಕಿಲೋಮೀಟರ್‌ನ ಏರಿಯ ಭಾಗದಲ್ಲಿ ಮೂರು ಸ್ಥಳಗಳಲ್ಲಿ ಮಾತ್ರ ಸ್ವಲ್ಪ ಉದ್ದಕ್ಕೆ ಪಿಸಿಸಿ ಲೈನಿಂಗ್ ಜೊತೆಗೆ ಸಿಎನ್‌ಎಸ್ ಪದರವು ಜಾರಿದೆ. ಈ ಜಾರಿಕೆಗೆ ಪರೀಕ್ಷೆ ಮಾಡಿ ಕಾರಣಗಳನ್ನು ಕಂಡುಹಿಡಿಯುವಂತೆ ಗುಣನಿಯಂತ್ರಣ ವಿಭಾಗದವರಿಗೆ ಸೂಚನೆ ನೀಡಲಾಗಿದೆ.

ಆ) ೫೨ನೇ ಕಿ. ಮೀಟರ್‌ನ ಕೆಲಸವನ್ನು ಗುತ್ತಿಗೆದಾರರಾದ ಮೆ. ಹಾರ್‌ಮಿನ್ಸ್ ಕನ್ಸ್‌ಟ್ರಕ್ಷನ್ ಇವರು ಮಾಡಿರುತ್ತಾರೆ. ಈ ಕಿ. ಮೀಟರ್‌ನ ಪೂರ್ಣ ಕೆಲಸಕ್ಕೆ ತಗಲಿದ ಒಟ್ಟು ವೆಚ್ಚ ೨೪೮.೫೦ ಲಕ್ಷ ರೂಪಾಯಿಗಳು.

ಇ) ಈ ಕಿಲೋಮೀಟರ್‌ನ ಕೆಲಸವು ಗುತ್ತಿಗೆದಾರರಿಂದ ೧೯೨ನೇ ಇಸವಿಯಲ್ಲಿ ಮಾಡಿ ಸಲ್ಪಟ್ಟಿದ್ದು ಕಳೆದ ೫ ವರ್ಷಗಳಲ್ಲಿ ಸತತವಾಗಿ ಕಾಲುವೆಯಲ್ಲಿ ನೀರು ಬಿಟ್ಟಿರುವುದರಿಂದ, ಕೆಲಸ ಮಾಡಿದ ವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಮೇಯ ಬರುವುದಿಲ್ಲ.

ಈ) ಈ ಕಿಲೋಮೀಟರಿನಲ್ಲಿ ಕೆಲಸ ನಡೆಯುತ್ತಿದ್ದ ವೇಳೆಯಲ್ಲಿ ಗುಣನಿಯಂತ್ರಣ ಸಿಬ್ಬಂದಿಯವರು ವಸ್ತುಗಳ ಪರಿಶೀಲನೆ ಹಾಗೂ ಕೆಲಸದ ಗುಣಮಟ್ಟದ ಬಗ್ಗೆ ಪರೀಕ್ಷೆ ನಡೆಸಿದ್ದಾರೆ. ಅವರ ವರದಿಯಲ್ಲಿ ಕಳಪೆಯೆಂದು ಕೆಲಸ ಆಗಿರಬಹುದಾದ ಬಗ್ಗೆ ಯಾವುದೇ ಕರಾರುಗಳು ಇರುವುದಿಲ್ಲ.

ಉ) ರಿಪೇರಿಗೆ ತಗಲಬಹುದಾದ ವೆಚ್ಚ ಸುಮಾರು ೨ ಲಕ್ಷ ರೂ.ಗಳು ಎಂದು ಅಂದಾಜು ಮಾಡಲಾಗಿದೆ.

ದಿವಂಗತ ಪಂಡಿತ ನೆಹರೂ ಅವರ ಜನ್ಮ ಶತಾಬ್ದಿ ಅಂಗವಾಗಿ ರಾಜ್ಯ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮ

೩೪೮. **ಶ್ರೀ ಪಿ. ಎಂ. ಚಿಕ್ಕಬೋರಯ್ಯ** (ವಿಧಾನ ಸಭಾ ಸದಸ್ಯರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭಾರತದ ಮೊದಲ ಪ್ರಧಾನಿ ಪಂಡಿತ್ ನೆಹರೂ ಅವರ ಜನ್ಮ ಶತಾಬ್ದಿ ಸಂವತ್ಸರ ಆಚರಣೆಯ ಅಂಗವಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು,

ಆ) ಮೈಸೂರಿನ ಅರಮನೆ, ಮೃಗಾಲಯ, ಲಲಿತಮಹಲ್ ಹಾಗೂ ರಂಗನತಿಟ್ಟು ಪಕ್ಷಿಧಾಮ ಪ್ರದೇಶಗಳು ಸೇರಿದಂತೆ "ಡಿಸ್ನಿ ಲ್ಯಾಂಡ್" ಮಾದರಿಯಲ್ಲಿ "ನೆಹರೂ ಲೋಕ" ನಿರ್ಮಾಣ ಯೋಜನೆಯಾವ ಹಂತದಲ್ಲಿದೆ,

ಇ) ಈ ಯೋಜನೆಗೆ ಬೇಕಾಗುವ ಹಣ ಹಾಗೂ ಕಾಲಾವಧಿ ಎಷ್ಟು,

ಈ) ಈ ಯೋಜನೆ ಪೂರ್ಣಗೊಳಿಸಲು ಕೇಂದ್ರ ಸರ್ಕಾರದವರ ನೆರವು ಕೋರಲಾಗಿದೆಯೇ,